<u>ಕರ್ನಾಟಕ ವಿಧಾನ ಪರಿಷತ್ತು</u>

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಮಂಜುನಾಥ್ ಭಂಡಾರಿ
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 108

ಉತ್ತರಿಸಬೇಕಾದ ದಿನಾಂಕ : 04-03-2025

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ಕೃಷಿಕರಿಗೆ ನೆರವಾಗುವ ನಿಟ್ಟಿನಲ್ಲಿ ಕೃಷಿ ಪತ್ತಿನ ಸಹಕಾರಿ ಸಂಘಗಳ ಮೂಲಕ ಶೂನ್ಯ ಬಡ್ಡಿದರದಲ್ಲಿ ಮತ್ತು ಕನಿಷ್ಠ ಬಡ್ಡಿದರದಲ್ಲಿ ಬೆಳೆ ಸಾಲ ನೀಡುವ ಕುರಿತು ಇಲಾಖೆ ಈಗಾಗಲೇ ರಚಿಸಿರುವ ನಿಯಮಗಳನ್ನು ಪರಿಷ್ಕರಿಸುವ ಯೋಚನೆ ಸರಕಾರದ ಮುಂದಿದೆಯೇ; | ಕರ್ನಾಟಕ ರಾಜ್ಯದಲ್ಲಿ ಕೃಷಿಕರಿಗೆ ನೆರವಾಗುವ ನಿಟ್ಟಿನಲ್ಲಿ ಕೃಷಿ ಪತ್ತಿನ ಸಹಕಾರಿ ಸಂಘಗಳ ಮೂಲಕ ಶೂನ್ಯ ಬಡ್ಡಿ ದರದಲ್ಲಿ ಮತ್ತು ಕನಿಷ್ಠ ಬಡ್ಡಿ ದರದಲ್ಲಿ ಬೆಳೆ ಸಾಲ ನೀಡುವ ಕುರಿತು ಸರ್ಕಾರ ದಿನಾಂಕ:25-07-2024 ರಂದು ಆದೇಶ ಹೊರಡಿಸಿದ್ದು, ಸದರಿ ಆದೇಶದಲ್ಲಿ ಪ್ರಮುಖವಾಗಿ ಈ ಕೆಳಕಂಡ ನಿಯಮಗಳಿದ್ದು, ಇವುಗಳನ್ನು ಪರಿಷ್ಕರಿಸುವ ಪ್ರಸ್ತಾವನೆ ಇರುವುದಿಲ್ಲ.<br><br>1. ಈ ಯೋಜನೆಯು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳು, ಟಿಬೇಟಿಯನ್ ಸಹಕಾರ ಸಂಸ್ಥೆಗಳು, ಲ್ಯಾಂಪ್ಸ್ ಸಹಕಾರ ಸಂಘಗಳು, ಪಿಕಾರ್ಡ್ ಬ್ಯಾಂಕುಗಳು ರೈತರಿಗೆ / ಮೀನುಗಾರರಿಗೆ ವಿತರಿಸುವ ಅಲ್ಪಾವಧಿ ಬೆಳೆ ಸಾಲ, ಪಶುಸಂಗೋಪನೆ ಮತ್ತು ಮೀನುಗಾರಿಕೆ ದುಡಿಯುವ ಬಂಡವಾಳ ಸಾಲಗಳಿಗೆ ಅನ್ವಯಿಸುತ್ತದೆ. |

| | | |
|---|---|---|
| | | 2. ಈ ಯೋಜನೆಯು ಒಬ್ಬ ಫಲಾನುಭವಿಗೆ ಗರಿಷ್ಟ ರೂ.5.00 ಲಕ್ಷಗಳವರೆಗೆ ನೀಡುವ ಅಲ್ಪಾವಧಿ ಬೆಳೆ ಸಾಲ ಹಾಗೂ ಪಶುಸಂಗೋಪನೆ ಮತ್ತು ಮೀನುಗಾರಿಕೆಗಾಗಿ ದುಡಿಯುವ ಬಂಡವಾಳ ಸಾಲಕ್ಕಾಗಿ ಗರಿಷ್ಟ ರೂ.2.00 ಲಕ್ಷಗಳವರೆಗೆ ವಿತರಿಸುವ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ. ಪಶುಸಂಗೋಪನೆ ಮತ್ತು ಮೀನುಗಾರಿಕೆ ದುಡಿಯುವ ಬಂಡವಾಳಕ್ಕಾಗಿ ರೂ.2.00 ಲಕ್ಷದವರೆಗೆ ಸಾಲ ಪಡೆದು ಬೆಳೆ ಸಾಲ ಪಡೆಯಬೇಕಾದಲ್ಲಿ ಬೆಳೆ ಸಾಲ, ಪಶುಸಂಗೋಪನೆ ಮತ್ತು ಮೀನುಗಾರಿಕೆ ದುಡಿಯುವ ಬಂಡವಾಳ ಉದ್ದೇಶಕ್ಕೆ ಒಟ್ಟು ರೂ.5.00 ಲಕ್ಷಗಳಿಗೆ ಮೀರತಕ್ಕದ್ದಲ್ಲ.<br><br>3. ರಾಜ್ಯ ಮಟ್ಟದ ತಾಂತ್ರಿಕ ಸಮಿತಿಯಿಂದ ನಿಗದಿಪಡಿಸಿದ ಸ್ಕೇಲ್ ಆಫ್ ಫೈನಾನ್ಸ್ ಮತ್ತು ಬೆಳೆ ವಿಮೆ ಆಧಾರದ ಮೇಲೆ ಮಂಜೂರಾದ ಸಾಲದ ಮಿತಿಗೆ ಮಾತ್ರ ಬಡ್ಡಿ ಸಹಾಯಧನ ಅನ್ವಯವಾಗುವುದು. ಕೊಯ್ಲು ನಂತರದ (Post harvest) ಹಾಗೂ ಇತರೆ ಉದ್ದೇಶಗಳಿಗೆ ನೀಡುವ ಸಾಲಗಳಿಗೆ ಬಡ್ಡಿ ಸಹಾಯಧನ ಅನ್ವಯವಾಗುವುದಿಲ್ಲ.<br><br>4. ರೈತರು ನಿಗದಿತ ಅವಧಿಯಲ್ಲಿ ಅಸಲು ಮರುಪಾವತಿಸಿದಲ್ಲಿ ಮಾತ್ರ ಬಡ್ಡಿ ಸಹಾಯಧನ ಲಭ್ಯವಾಗುತ್ತದೆ. |

| | | |
|---|---|---|
| ಆ) | ರಾಜ್ಯದ ಕೃಷಿಕರ ಕೃಷಿ ಭೂಮಿಯ ದಾಖಲೆಗಳು ಕ್ಲುಪ್ತ ಸಮಯದಲ್ಲಿ ಇಂದೀಕರಣವಾಗದ ಕಾರಣ ಹಾಗೂ ಕೃಷಿ ಪತ್ತಿನ ಸಹಕಾರಿ ಸಂಘಗಳ ಸಾಲ ನಿಯಮಗಳು ಕ್ಲಿಷ್ಟಕರವಾಗಿರುವ ಕಾರಣ ಜನರು ಮೈಕ್ರೋ ಫೈನಾನ್ಸ್ ಸಂಸ್ಥೆಗಳನ್ನು ಕಿರುಸಾಲಕ್ಕಾಗಿ ಅವಲಂಬಿಸಿರುವ ಕುರಿತು ಸರಕಾರದ ಗಮನಕ್ಕೆ ಬಂದಿದೆಯೇ;<br>ಮೈಕ್ರೋ ಫೈನಾನ್ಸ್ ಬಾಧಿತರು ಸ್ಥಳೀಯ ಸಹಕಾರಿ ಸಂಘಗಳನ್ನು ಸಾಲಕ್ಕಾಗಿ ಸಂಪರ್ಕಿಸಿದ ಕುರಿತು ಮಾಹಿತಿ ನೀಡುವುದು; | ರೈತರು ಬೆಳೆ ಸಾಲ ಪಡೆಯಲು ಆಧಾರ್ ಕಾರ್ಡ್ ಹಾಗೂ ಪಹಣಿಯೊಂದಿಗೆ ರೈತನು ವಾಸಿಸುವ ವಿಳಾಸ ಅಥವಾ ಭೂಮಿ ಹೊಂದಿರುವ ವ್ಯಾಪ್ತಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಅರ್ಜಿ ಸಲ್ಲಿಸಿದಲ್ಲಿ, ಸಂಘದ FRUITS ತಂತ್ರಾಂಶದಲ್ಲಿ ಇದೇ ಭೂಮಿ ಮೇಲೆ ಇತರೆ ಬ್ಯಾಂಕುಗಳಲ್ಲಿ ಸಾಲ ಪಡೆಯದೇ ಇರುವುದನ್ನು ಖಚಿತ ಪಡಿಸಿಕೊಂಡು ರೈತನು ಹೊಂದಿರುವ ಭೂಮಿ, ಬೆಳೆಯುವ ಬೆಳೆ ಆಧರಿಸಿ ಗರಿಷ್ಟ ಸಾಲದ ಮಿತಿ (ಎನ್‌ಸಿಎಲ್) ತಯಾರಿಸಿ ಡಿಸಿಸಿ ಬ್ಯಾಂಕುಗಳಿಗೆ ಸಲ್ಲಿಸುತ್ತವೆ. ಡಿಸಿಸಿ ಬ್ಯಾಂಕುಗಳು ತಮ್ಮ ಬಂಡವಾಳ ಮತ್ತು ಸರ್ಕಾರ ನೀಡಿದ ಸಾಲ ವಿತರಣೆ ಗುರಿ ಆಧರಿಸಿ ಬೆಳೆ ಸಾಲದ ಮಿತಿಯನ್ನು ವಿತರಿಸಲಿದ್ದು, ದಾಖಲೆಗಳು ಇಂದೀಕರಣವಾಗದ ಪ್ರಕರಣಗಳು ಹೆಚ್ಚಿಗೆ ಇರುವುದಿಲ್ಲ.<br><br>2024-25 ನೇ ಸಾಲಿಗೆ 35.10 ಲಕ್ಷ ರೈತರಿಗೆ ಸಹಕಾರ ಸಂಘಗಳಿಂದ ಬೆಳೆ ಸಾಲ ವಿತರಿಸಲು ಗುರಿ ಹೊಂದಲಾಗಿದೆ.<br><br>ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಾಣಿಜ್ಯ ಬ್ಯಾಂಕ್, ಗ್ರಾಮೀಣ ಬ್ಯಾಂಕ್ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ನೀಡುವ ಬೆಳೆ ಸಾಲಕ್ಕೆ ಮಾತ್ರ ಬಡ್ಡಿ ಸಹಾಯಧನವನ್ನು ನೀಡುತ್ತಿದ್ದು, ಮೈಕ್ರೋ ಫೈನಾನ್ಸ್ ಕಂಪನಿಗಳು ನೀಡುವ ಸಾಲಗಳಿಗೆ ಬಡ್ಡಿ ಸಹಾಯಧನ ಲಭ್ಯವಾಗುವುದಿಲ್ಲ ಮತ್ತು ರೈತರು ಹೆಚ್ಚಿನ ಬಡ್ಡಿ ಪಾವತಿಸಬೇಕಾಗುತ್ತದೆ. ಆದ್ದರಿಂದ ಬೆಳೆ ಸಾಲವನ್ನು ಪಡೆಯಲು ರೈತರು ಸಹಕಾರ ಸಂಘ ಅಥವಾ ವಾಣಿಜ್ಯ / ಗ್ರಾಮೀಣ ಬ್ಯಾಂಕುಗಳನ್ನೆ ಅವಲಂಬಿತವಾಗಿದ್ದು, ಮೈಕ್ರೋ ಫೈನಾನ್ಸ್ |

| | | |
|---|---|---|
| | | ಕಂಪನಿಗಳನ್ನು ಮೊರೆಹೋಗುವ ಸಂಭವ ತೀರಾ ಕಡಿಮೆ ಇರುತ್ತದೆ.<br><br>ಇದಲ್ಲದೇ ಕೃಷಿ ಜಮೀನನ್ನು ಅಡವಿಟ್ಟುಕೊಂಡು ಕೃಷಿಯೇತರ ಸಾಲ ನೀಡಲು FRUITS ತಂತ್ರಾಂಶದಲ್ಲಿ ಅವಕಾಶ ಇರುವುದಿಲ್ಲ ಹಾಗೂ ಬಹುತೇಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಈ ಪದ್ಧತಿಯೂ ಇರುವುದಿಲ್ಲ. ದಕ್ಷಿಣ ಕನ್ನಡ, ಉಡುಪಿ, ಕೊಡಗು, ಶಿವಮೊಗ್ಗ ಜಲ್ಲೆಯ ಕೆಲವೇ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಮಾತ್ರ ಕೃಷಿಗೆ ಬಳಸುವ ವಾಹನಗಳಿಗೆ ಮತ್ತು ಕೃಷಿ ಭೂಮಿಯಲ್ಲಿ ನಿರ್ಮಿಸುವ ಮನೆಗಳಿಗೆ ಮತ್ತು ಗೋದಾಮುಗಳಿಗೆ ಕೃಷಿ ಜಮೀನನ್ನು ಅಡವಿಟ್ಟುಕೊಂಡು ಸಾಲ ನೀಡಲಾಗುತ್ತಿದೆ. ನಬಾರ್ಡ್ ಈ ಉದ್ದೇಶಗಳಿಗೆ ನೀಡುವ ಸಾಲಗಳನ್ನು ಕೃಷಿ ಸಾಲ ಎಂದೇ ಪರಿಗಣಿಸಿರುತ್ತದೆ. ಆದರೆ ಸರ್ಕಾರದಿಂದ ಶೂನ್ಯ ಅಥವಾ ಶೇ.3 ರ ಬಡ್ಡಿ ದರದಲ್ಲಿ ಸಾಲ ದೊರೆಯುವುದಿಲ್ಲ. |
| ಇ) | ಮೈಕ್ರೋ ಫೈನಾನ್ಸ್ ಹಾವಳಿಯಿರುವ ಜಿಲ್ಲೆಗಳಲ್ಲಿ ಕೃಷಿ ಪತ್ತಿನ ಸಹಕಾರಿ ಸಂಘಗಳಿಗೆ ಸಲ್ಲಿಸಿರುವ ಸಾಲದ ಅರ್ಜಿಗಳಲ್ಲಿ ಎಷ್ಟು ಕೃಷಿಕರಿಗೆ ಸಾಲ ನೀಡಿದೆ ಮತ್ತು ಸಾಲ ನೀಡಲು ತಿರಸ್ಕರಿಸಿದೆ; (ಶೇಕಡಾವಾರು ಸಹಿತ ವಿವರ ನೀಡುವುದು) | ರಾಜ್ಯದಲ್ಲಿರುವ ಕೃಷಿ ಪತ್ತಿನ ಸಹಕಾರಿ ಸಂಘಗಳಿಗೆ ಬೆಳೆ ಸಾಲಕ್ಕಾಗಿ 23,73,233 ರೈತರು ಅರ್ಜಿ ಸಲ್ಲಿಸಿದ್ದು, ಈ ಪೈಕಿ 23,69,555 ರೈತರಿಗೆ ಸಾಲ ಮಂಜೂರು ಮಾಡಲಾಗಿದ್ದು, 3438 ಅರ್ಜಿಗಳಿಗೆ ಸಾಲ ಮಂಜೂರು ಮಾಡಲು ಪರಿಶೀಲನೆಯಲ್ಲಿದ್ದು, 240 ಮಂದಿ ರೈತರ ಅರ್ಜಿಗಳನ್ನು ಮಾತ್ರ ತಿರಸ್ಕರಿಸಿದ್ದು, ಇದು ಶೇ.0.01 ರಷ್ಟಿರುತ್ತದೆ.<br><br>ಜಿಲ್ಲಾವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |

| | | |
|---|---|---|
| ಈ) | ವರ್ಷ 2024–25 ರಲ್ಲಿ ರೂ.5.00 ಲಕ್ಷಗಳವರೆಗೆ ಶೂನ್ಯ ಬಡ್ಡಿದರಕ್ಕೆ ಸಂಬಂಧಿಸಿದಂತೆ 1,15,694 ಅರ್ಜಿಗಳು ಮತ್ತು ಶೇ.3 ರ ಬಡ್ಡಿದರದಲ್ಲಿ ರೂ.15.00 ಲಕ್ಷಗಳವರೆಗೆ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲಕ್ಕೆ 7051 ಅರ್ಜಿಗಳು ಪರಿಶೀಲನೆಯಲ್ಲಿದ್ದು ಡಿಸಿಸಿ ಹಂತದಲ್ಲಿ ಪ್ರಸ್ತುತ ಎಷ್ಟು ಅರ್ಜಿಗಳಿಗೆ ಸಾಲ ವಿತರಿಸಿದೆ; ಎಷ್ಟು ಅರ್ಜಿಗಳನ್ನು ತಿರಸ್ಕರಿಸಿದೆ: ಅದಕ್ಕೆ ಕಾರಣಗಳೇನು? | ಪ್ರಸಕ್ತ 2024–25 ನೇ ಸಾಲಿನಲ್ಲಿ ದಿನಾಂಕ:13–12–2024 ರ ವರೆಗೆ ಡಿಸಿಸಿ ಬ್ಯಾಂಕುಗಳ ಹಂತದಲ್ಲಿ ಪರಿಶೀಲನೆಯಲ್ಲಿದ್ದ ರೂ.5.00 ಲಕ್ಷಗಳವರೆಗೆ ಶೂನ್ಯ ಬಡ್ಡಿ ದರಕ್ಕೆ ಸಂಬಂಧಿಸಿದಂತೆ 1,15,694 ಅರ್ಜಿಗಳ ಪೈಕಿ ದಿನಾಂಕ:31–01–2025 ರ ವರೆಗೆ 1,15,531 ಅರ್ಜಿಗಳಿಗೆ ಸಾಲ ಮಂಜೂರು ಮಾಡಿದ್ದು, 163 ಅರ್ಜಿಗಳಿಗೆ ಮಾತ್ರ ಸಾಲ ವಿತರಣೆ ಮಾಡಲು ಬಾಕಿ ಇರುತ್ತದೆ.<br><br>ಶೇ.3 ರ ಬಡ್ಡಿದರದಲ್ಲಿ ರೂ.15.00 ಲಕ್ಷಗಳವರೆಗೆ ಕೃಷಿ ಹಾಗೂ ಕೃಷಿ ಸಂಬಂಧಿತ ಸಾಲಕ್ಕೆ ಸಂಬಂಧಿಸಿದಂತೆ ಪರಿಶೀಲನೆಯಲ್ಲಿದ್ದ 7051 ಅರ್ಜಿಗಳ ಪೈಕಿ ದಿನಾಂಕ: 31–01–2025 ರ ಅಂತ್ಯದವರೆಗೆ 3548 ಅರ್ಜಿಗಳಿಗೆ ಸಾಲ ಮಂಜೂರು ಮಾಡಿದ್ದು, 3346 ಅರ್ಜಿಗಳಿಗೆ ಸಾಲ ವಿತರಿಸಲು ಬಾಕಿ ಇದ್ದು, ಮಾನದಂಡಗಳನ್ನು ಪೂರೈಸದ 157 ಅರ್ಜಿಗಳನ್ನು ಮಾತ್ರ ತಿರಸ್ಕರಿಸಲಾಗಿದೆ. |

**ಸಂಖ್ಯೆ: ಸಿಒ 43 ಸಿಎಲ್‌ಎಸ್ 2025**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
**ಇವರ ಪ್ರಶ್ನೆ ಸಂಖ್ಯೆ: 108 ಕ್ಕೆ ಅನುಬಂಧ-1**
ರಾಜ್ಯದಲ್ಲಿರುವ ಕೃಷಿ ಪತ್ತಿನ ಸಹಕಾರಿ ಸಂಘಗಳಿಗೆ ಬೆಳೆ ಸಾಲಕ್ಕಾಗಿ ರೈತರು ಸಲ್ಲಿಸದ ಅರ್ಜಿಗಳ ವಿವರ

| ಜಿಲ್ಲೆಯ ಹೆಸರು | ಅರ್ಜಿ ಸಂಖ್ಯೆ | ಮಂಜೂರಾದ ಸಂಖ್ಯೆ | ತಿರಸ್ಕೃತ ಸಂಖ್ಯೆ | ಬಾಕಿ |
|---|---|---|---|---|
| ಬೆಂ.ನಗರ | 7147 | 7147 | 0 | 0 |
| ಬೆಂ.ಗ್ರಾ. | 19050 | 19050 | 0 | 0 |
| ರಾಮನಗರ | 44419 | 44419 | 0 | 0 |
| ಕೋಲಾರ | 14373 | 14296 | 0 | 77 |
| ಚಿಕ್ಕಬಳ್ಳಾಪುರ | 18464 | 18374 | 0 | 90 |
| ತುಮಕೂರು | 103475 | 103475 | 0 | 0 |
| ಚಿತ್ರದುರ್ಗ | 45458 | 45218 | 240 | 0 |
| ದಾವಣಗೆರೆ | 67725 | 67725 | 0 | 0 |
| ಶಿವಮೊಗ್ಗ | 50177 | 50177 | 0 | 0 |
| ಬೀದರ | 103439 | 103439 | 0 | 0 |
| ಕಲಬುರಗಿ | 86865 | 86865 | 0 | 0 |
| ಯಾದಗಿರ | 26900 | 26900 | 0 | 0 |
| ರಾಯಚೂರು | 78118 | 78118 | 0 | 0 |
| ಕೊಪ್ಪಳ | 34356 | 34356 | 0 | 0 |
| ಬಳ್ಳಾರಿ | 23948 | 23948 | 0 | 0 |
| ವಿಜಯನಗರ | 44011 | 44011 | 0 | 0 |
| ಮೈಸೂರು | 55598 | 54860 | 0 | 738 |
| ಚಾಮರಾಜನಗರ | 19852 | 19747 | 0 | 105 |
| ಮಂಡ್ಯ | 114257 | 114257 | 0 | 0 |
| ಹಾಸನ | 128357 | 128230 | 0 | 127 |
| ಚಿಕ್ಕಮಗಳೂರು | 47342 | 47342 | 0 | 0 |
| ಕೊಡಗು | 36226 | 36226 | 0 | 0 |
| ದಕ್ಷಿಣ ಕನ್ನಡ | 67218 | 67218 | 0 | 0 |
| ಉಡುಪಿ | 26663 | 26663 | 0 | 0 |
| ಬೆಳಗಾವಿ | 322476 | 322476 | 0 | 0 |
| ವಿಜಯಪುರ | 342669 | 342642 | 0 | 27 |
| ಬಾಗಲಕೋಟೆ | 273784 | 273784 | 0 | 0 |
| ಧಾರವಾಡ | 22822 | 21340 | 0 | 1482 |
| ಹಾವೇರಿ | 27683 | 26903 | 0 | 780 |
| ಗದಗ | 21422 | 21410 | 0 | 12 |
| ಉತ್ತರ ಕನ್ನಡ | 98939 | 98939 | 0 | 0 |
| | 2373233 | 2369555 | 240 | 3438 |

ಸಹಕಾರ ಸಂಘಗಳ ಅಪರ ನಿಬಂಧಕರು,
(ಪತ್ತು)